ಮಾಡಲು' ಮಹಾರಾಜರು ಮಾಡಿದ ಪ್ರಯತ್ನವನ್ನು ನೆನೆದು ಮಸಣಮ್ಮ ನಗುತ್ತಾಳೆ. ಮಹಾರಾಜರಿಗೆ ಈ ಭಾವನೆ ಬಂದದ್ದೇ ತಡ ಅವರು ಪ್ರಯೋಗ ಶೀಲರಾದರು. ಆಯ್ದ ಕೆಲವು ಸೋಲಿಗರನ್ನು ಮೈಸೂರಿಗೆ ಕರೆದೊಯ್ದು ಅರಮನೆಯ ಆವರಣದಲ್ಲಿ ಸ್ಥಳ ಒದಗಿಸಿದರು. ಮಲಗಲು ಹಾಸಿಗೆ, ಊಟಕ್ಕೆ ಒಳ್ಳೆಯ ತಟ್ಟೆ – ಟೇಬಲ್ ಕೂಡ ಕೊಟ್ಟರಂತೆ. ಆದರೆ ಸೋಲಿಗರಿಗೆ ಇದಾವುದೂ ಒಗ್ಗಲಿಲ್ಲ. ಅವರು ನೆಲದ ಮೇಲೆ ಕುಳಿತು ಊಟ ಮಾಡುತ್ತಿದ್ದರು: ಹಾಸಿಗೆ ಅವರಿಗೆ ಸ್ವಲ್ಪವೂ ಹಿಡಿಸಲಿಲ್ಲ, ಅಲ್ಲೇ ನೆಲದ ಮೇಲೆ ಹಾಸಿದ ಜಮಖಾನದ ಮೇಲೆ ಹೋಗಿ ಮಲಗಿದರು: ಇಷ್ಟು ಸಾಲದೆಂಬಂತೆ ದಿನಾ ಬೆಳಗಾಗೆದ್ದು ಕೋಣೆಯಿಂದ ಹೊರಗೆಬಂದು ಅರಮನೆ ಆವರಣದಲ್ಲೇ ಸಿಗುತ್ತಿದ್ದ ಕಸಕಡ್ಡಿಗಳನ್ನು ಗುಡ್ಡೆ ಹಾಕಿ ಬೆಂಕಿ ಹಚ್ಚಿ ಬೆಂಕಿ ಕಾಯುತ್ತಿದ್ದರಂತೆ. 'ನಮ್ಮ ಜನಕ್ಕೆ ಬೆಂಕಿ ಕಾಯದಿದ್ದರೆ ಆಗೊಲ್ಲ ಸ್ವಾಮಿ ನಾವು ಏನು ಬೇಕಾದರೂ ಬಿಡ್ತೀವಿ ಬೆಂಕಿ ಬಿಡಕ್ಕಾಗಲ್ಲ' ಎಂದಳು ಮಸಣಮ್ಮ. ಮಹಾರಾಜರು ಬೆಳಗಿನ ವಾಕಿಂಗ್ ಬಂದಾಗ ಈ ಸೋಲಿಗರು ಬೆಂಕಿ ಕಾಯುವ ದೃಶ್ಯ ಕಣ್ಣಿಗೆ ಬೀಳುತ್ತಿತ್ತು. ಹದಿನೈದು – ಇಪ್ಪತ್ತು ದಿನ ಮಹಾರಾಜರು ಕಾದು ನೋಡಿದರು. ಈ ಸೋಲಿಗರಲ್ಲಿ ಯಾವ ಬದಲಾವಣೆಯೂ ಆಗಲಿಲ್ಲ. ಸೋಲೊಪ್ಪಿಕೊಂಡ ಮಹಾರಾಜರು 'ನೀರ ಮೀನು ನೀರಲ್ಲೇ ಇರಲಿ' ಎಂದು ಸೋಲಿಗರನ್ನೂ ಬೆಟ್ಟಕ್ಕೆ ಕಳಿಸಿದರಂತೆ. ಮಹಾರಾಜರ ಮನಸ್ಸಿನಲ್ಲಿ ಸೋಲಿಗರ ಅಭಿವೃದ್ಧಿ – ಪುನರ್ವಸತಿ ಕುರಿತು ಅವರದೇ ಕಲ್ಪನೆಗಳಿದ್ದವೆಂದು ತೋರುತ್ತದೆ. ನಾಡಜನಗಳ 'ಬೇಕು'ಗಳನ್ನು ಕಾಡಜನಗಳ ಮೇಲೆ ಹೇರಲಾಗುವುದಿಲ್ಲ ಎಂಬ ಸತ್ಯ ಮಹಾರಾಜರಿಗೆ ನಿಧಾನವಾಗಿ ತಿಳಿಯಿತು. ಹಾಗಾಗಿ ಸೋಲಿಗರನ್ನು ಅವರ ಪಾಡಿಗೆ ಅವರು ಇರಲು ಬಿಟ್ಟು ಬಿಟ್ಟರು ಎಂದು ತೋರುತ್ತದೆ.

ಮಾತು ಕತೆ ಮುಗಿದ ಬಳಿಕ ನಾವು ಹೊರಟೆವು. 'ನನ್ನನ್ನು ನೋಡೋಕ್ಕೆ ಇಷ್ಟು ದೂರ ಬಂದಿರಲ್ಲ' ಎಂದು ಕೃತಜ್ಞತೆಯಿಂದ ನನ್ನ ಎರಡೂ ಕೈಗಳನ್ನೂ ಹಿಡಿದು ತನ್ನ ಹಣೆಗೆ ಮುಟ್ಟಿಸಿಕೊಂಡು 'ಹೋಗಿ ಬನ್ನಿ ದಣೀ' ಎಂದಳು. 'ಅಜ್ಜಿಗೆ ಎಲೆಅಡಿಕೆಗೇ ಅಂತ ಏನಾದರೂ ಕೊಡಿ ಸಾ' ಎಂದು ಪುಟ್ಟರಂಗ ಹೇಳಿದ. ನೂರು ರೂಪಾಯಿಕೊಟ್ಟೆ. ಮಸಣಮ್ಮ ಬಹಳ ಸಂತೋಷದಿಂದ ತೆಗೆದುಕೊಂಡಳು.

## ಜಿ.ಎಸ್. ಜಯದೇವ

1973ರ ಸುಮಾರಿಗೆ ಬೆಂಗಳೂರಿನ ಸೆಂಟ್ರಲ್ ಕಾಲೇಜಿನಲ್ಲಿ ಜೀವಶಾಸ್ತ್ರದಲ್ಲಿ ಎಂ.ಎಸ್ಸಿ. ಪದವಿ ಪಡೆದು, ಬಳಿಕ ಚಾಮರಾಜನಗರದ ಜೆ.ಎಸ್.ಎಸ್. ಕಾಲೇಜಿನಲ್ಲಿ ಪ್ರಾಧ್ಯಾಪಕರಾಗಿದ್ದರು. ಬಳಿಕ ಕೆಲಸಕ್ಕೆ ರಾಜೀನಾಮೆ ಕೊಟ್ಟು ಚಾಮರಾಜನಗರದಲ್ಲಿ ಶಾಲಾ ಮಕ್ಕಳಿಗೆ ಕನ್ನಡ, ವಿಜ್ಞಾನ ಮತ್ತು ಗಣಿತ ಕಲಿಸುತ್ತಿದ್ದಾರೆ. ಅನಾಥ ಮಕ್ಕಳ ಪುನರ್ವಸತಿಯ ಕೆಲಸ ಮಾಡುತ್ತಲೇ ಬಿಳಿಗಿರಿರಂಗನ ಬೆಟ್ಟದಲ್ಲಿ ಬುಡಕಟ್ಟು ಸಮೂಹಗಳೊಂದಿಗೆ ಒಡನಾಟವಿಟ್ಟುಕೊಂಡಿದ್ದಾರೆ.

ತಮ್ಮ 'ದೀನಬಂಧು' ಸಂಸ್ಥೆಯ ಮೂಲಕ ಈವರೆಗೆ ತಾವು ಒಡನಾಡಿಕೊಂಡು ಬಂದ ಬಿಳಿಗಿರಿರಂಗನ ಬೆಟ್ಟದ ಸೋಲಿಗರೊಂದಿಗಿನ ನೆನಪುಗಳನ್ನು ಪ್ರಬಂಧಗಳನ್ನಾಗಿಸಿದ್ದಾರೆ. ಆ ಪ್ರಬಂಧಗಳ ಪುಸ್ತಕ ಪ್ರಕಟಣೆಯ ಹಂತದಲ್ಲಿದೆ. ಜಯದೇವ ಅವರು ಡಾ. ಸುದರ್ಶನ್ ಅವರೊಂದಿಗೆ ಬಿಳಿಗಿರಿರಂಗನ ಬೆಟ್ಟದಲ್ಲಿ ಸೋಲಿಗರ ಜೀವನದ ಸುಧಾರಣೆಗಾಗಿ ಕೆಲವು ವರ್ಷಗಳ ಕಾಲ ಒಡನಾಡಿದ ಪರಿಯನ್ನು, ಆ ಅನುಭವಗಳ ನಿರೂಪಣೆಯನ್ನು ಅವರ ಪ್ರಬಂಧಗಳು ಒಳಗೊಂಡಿವೆ.